ಸಾಕ್ಷಿಯನ್ನು ದಿನಾಂಕ 18-11-2022 ರಂದು ಪ್ರಮಾಣ ಮಾಡಿಸಲಾಯಿತು.

<u>**ಮುಂದುವರೆದ** ಪಾಟೀ ಸವಾಲುಃ **ಪ್ರತಿವಾದಿ** ಪರ ಶ್ರೀ.ಡಿ ಎಂ ಎನ್ ವಕೀಲರಿಂದಃ</u>

ರುದ್ರಪ್ಪ ಜೀವಂತವಿದ್ದಾಗ ಗದಿಗೆವ್ವ ಹಾಗೂ ಇತರೆ ವಾದಿಯರು ತವರು ಮನೆಗೆ ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ತಂದೆಯನ್ನೇ ಮಕ್ಕಳು ಮನೆಯಿಂದ ಹೊರಗೆ ಹಾಕಿದ್ದರಿಂದ ಅವರು ತವರು ಮನೆಗೆ ಬರುತ್ತಿರಲಿಲ್ಲ. ಆ ರೀತಿ ನನಗೆ ಯಾರು ಹೇಳಿದ್ದು ಎಂದು ಕೇಳಿದರೆ ನಾನೇ 3 ವರ್ಷ ರುದ್ರಪ್ಪನನ್ನು ಆ ಸಮಯ ಜೋಪಾನ ಮಾಡಿದ್ದರಿಂದ ನನಗೆ ಗೊತ್ತಿದೆ ಎಂದು ನುಡಿಯುತ್ತೇನೆ. ರುದ್ರಪ್ಪರವರ ಜೀವಿತ ಕಾಲದಲ್ಲಿ ನಾನು ರುದ್ರಪ್ಪನ ಸಹೋದರನ ಮಗನಾಗಿದ್ದು ರುದ್ರಪ್ಪನನ್ನು ಜೋಪಾನ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ಮಕ್ಕಳು ಆ ರೀತಿ ರುದ್ರಪ್ಪ ಅವರನ್ನು ಮನೆಯಿಂದ ಹೊರಗೆ ಹಾಕಿದ್ದರಿಂದ ತಕ್ಷಣ ವಾಟ್ನಿ ದಾವೆ ಅಥವಾ ವಕೀಲರ ನೋಟಿಸ ಕಳುಹಿಸುವುದು ಮುಂತಾದ ಕಾನೂನು ಕ್ರಮವನ್ನು ರುದ್ರಪ್ಪ ಜರುಗಿಸಿದ್ದಾರೆಯೇ ಎಂದು ಕೇಳಿದರೆ ಇಲ್ಲ ಎಂದು ನುಡಿಯುತ್ತೇನೆ. ರುದ್ರಪ್ಪನ ಕಡೆಯಿಂದ ಯಾವುದಾದರೂ ದಾವೆ ದಾಖಲಿಸಲು ನಾನು ಪ್ರಯತ್ನ ಪಟ್ಟಿದ್ದೇನೆಯೇ ಎಂದು ಕೇಳಿದರೆ ಇಲ್ಲ ಎಂದು ನುಡಿಯುತ್ತೇನೆ. ಮುಂದೆ ವೈಮನಸ್ಸು ಆಗಬಾರದು ಎಂದು ರುದ್ರಪ್ಪನೇ ವಾಟ್ನಿ ಮಾಡಿಸಿದ್ದರಿಂದ ಆ ರೀತಿ ಯಾವುದೇ ಕಾನೂನು ಕ್ರಮ ರುದ್ರಪ್ಪನ ಜೀವಿತ ಕಾಲದಲ್ಲಿ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಈಗ ತೋರಿಸುತ್ತಿರುವ ಮ್ಯೂಟೇಶನ್ ಎಕ್ಸಟ್ರ್ಯಾಕ್ಟನ್ನು ಓದಲು ನನಗೆ ಆಗುತ್ತಿಲ್ಲ. ಸಾಕ್ಷಿಗೆ ತೋರಿಸಿರುವ ದಾಖಲೆಯನ್ನು ಸಾಕ್ಷಿ ಒಪ್ಪಿಕೊಂಡಿಲ್ಲವಾದರೂ ಕೂಡ ಅದು ಏನು ಎಂದು ಗುರ್ತಿಸುವ ಉದ್ದೇಶದಿಂದ ಮಾತ್ರ ನಿಐ.4 ಎಂದು ಗುರ್ತಿಸಲಾಯಿತು. ನಿಐ.4 ಎಡ್ಮಿಟೆಡ್ ಇನ್ ಎವಿಡೆನ್ಸ ಅಲ್ಲ ಎಂದು ಸ್ಪಷ್ಟಿಕರಿಸಲಾಗಿದೆ ಹಾಗೂ ಕಾನೂನುಬದ್ಧವಾಗಿ ಸದರಿ ದಾಖಲೆಯನ್ನು ನಿಶಾನಿಕರಿಸಿಕೊಳ್ಳಲು ಅವಕಾಶವನ್ನು ಮುಕ್ತವಾಗಿರಿಸಲಾಗಿದೆ. ಯಾವ ವರ್ಷದಿಂದ ಯಾವ ವರ್ಷದವರೆಗೆ ರುದ್ರಪ್ಪನನ್ನು ನಾನು ಜೋಪಾನ ಮಾಡಿದ್ದು ಎಂದು ಕೇಳಿದರೆ 1998 ರಿಂದ 2003 ರವರೆಗೆ ಎಂದು ನುಡಿಯುತ್ತೇನೆ. ರುದ್ರಪ್ಪ ಯಾವ ಖಾಯಿಲೆ ಇತ್ತು ಎಂದು ಕೇಳಿದರೆ ಆತ ಮದ್ಯಪಾನ ಮಾಡಿ ಆತನಿಗೆ ದೇಹದಲ್ಲಿ ಶಕ್ತಿ ಇರಲಿಲ್ಲ ಹಾಗೂ ಬೇರೆ ಏನೂ ಖಾಯಿಲೆ ಇರಲಿಲ್ಲ

ಎಂದು ನುಡಿಯುತ್ತೇನೆ. ರುದ್ರಪ್ಪ ಸಾಕಷ್ಟು ವರ್ಷ ಖಾಯಿಲೆ ಬಿದ್ದು ಆತನ ಸಣ್ಣ ಮಗ ಗದಿಗೆಪ್ಪನೇ ಆತನನ್ನು ನೋಡಿಕೊಂಡಿದ್ದು ಎಂದರೆ ಸರಿಯಲ್ಲ. ಕಲಘಟಗಿ ತಾಲೂಕಿನಿಂದ 2 ನೇ ಪ್ರತಿವಾದಿ ಚಂದ್ರವ್ವಳನ್ನು ಕೂಡ ಆಕೆಯ ಅನಾರೋಗ್ಯದ ನಿಮಿತ್ತ ಚಿಕಿತ್ಸೆ ಕೊಡಿಸಲು 3 ನೇ ಪ್ರತಿವಾದಿಯೇ ಕರೆದುಕೊಂಡು ಬಂದು ಸಾಕಷ್ಟು ವರ್ಷ ಚಿಕಿತ್ಸೆ ಕೊಡಿಸಿದ್ದಾನೆ ಎಂದರೆ ಸರಿಯಲ್ಲ. ವಾದಿಯರು ನನ್ನ ಮನೆಗೆ ಬರುತ್ತಿದ್ದರು ಆದರೆ ತವರು ಮನೆಗೆ ಹೋಗುತ್ತಿರಲಿಲ್ಲ. ಈಗ ನಾನು ವಾಸವಿರುವ ಬಸವನಗರದಲ್ಲಿರುವ ನನ್ನ ಮನೆಗೆ ವಾದಿಯರು ಬರುತ್ತಿದ್ದರು. ರುದ್ರಪ್ಪನಿಗೆ ಉಣ್ಣಲು ತಿನ್ನಲು ನಾನು ಕೊಡುತ್ತಿದ್ದೆ ಹಾಗೂ ನಮ್ಮ ಮನೆಯ ಸಮೀಪ ಇರುವ ಖುಲ್ಲಾ ಜಾಗದಲ್ಲಿ ರುದ್ರಪ್ಪ ಮಲಗಿಕೊಳ್ಳುತ್ತಿದ್ದ. 2008 ರಲ್ಲಿ ನಾನು ಬಸವೇಶ್ವರ ನಗರದಲ್ಲಿ ಇರುವಾಗ ರುದ್ರಪ್ಪ ಎಲ್ಲಿ ಮಲಗಿಕೊಳ್ಳುತ್ತಿದ್ದ ಎಂದರೆ ಆತನ ಮನೆಯಲ್ಲಿಯೇ ಆತನದು ಒಂದು ರೂಂ ಇತ್ತು ಹಾಗೂ ಅಲ್ಲಿ ಮಲಗಿಕೊಳ್ಳುತ್ತಿದ್ದ ಎಂದು ನುಡಿಯುತ್ತೇನೆ. 1998 ರಿಂದ 2003 ರವರೆಗೆ ರುದ್ರಪ್ಪನನ್ನು ನಾನು ನೋಡಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ನನ್ನ ಪರಿಸ್ಥಿತಿಯೇ ಸರಿ ಇಲ್ಲದಿರುವಾಗ ರುದ್ರಪ್ಪನನ್ನು ನಾನು ನೋಡಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಉದ್ಯೋಗ ಇಲ್ಲದೇ ಏನೂ ಗೊತ್ತಿಲ್ಲದ ವಾದಿಯರ ತಲೆಗೆ ದುಷ್ಟ ವಿಚಾರ ತುಂಬಿ ಈ ದಾವೆಯನ್ನು ನಾನೇ ದಾಖಲಿಸಿರುವುದು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಅಕ್ಕತಂಗಿಯವರು ನನ್ನ ಮನೆಗೆ ಬಂದಾಗ ಅವರ ಸಹೋದರರು ಯಾವುದಕ್ಕೂ ಹಚ್ಚಿಕೊಳ್ಳಲಿಲ್ಲ ಹಾಗೂ ಆದ್ದರಿಂದ ನನ್ನ ಬಳಿ ಅವರು ಬಂದಾಗ ನಾನು ನಿಂತು ಕೇಸ್ ಮಾಡಿಸಿಕೊಟ್ಟಿದ್ದೇನೆ. ಅದೇ ರೀತಿ ರುದ್ರಪ್ಪನಿಗೆ ಆಸ್ತಿಯಲ್ಲಿ ಹಿಸ್ಸೆ ಕೊಡಿಸಲು ಪ್ರಯತ್ನಪಟ್ಟಿಲ್ಲವೇ ಎಂದು ಕೇಳಿದರೆ ಆತನಿಗೆ ವಯಸ್ಸಾಗಿತ್ತು ಹಾಗೂ ಕುಡಿದು ಅಡ್ಡಾಡುತ್ತಿದ್ದ ಹಾಗೂ ಆತನಿಗೆನೇ ಮಕ್ಕಳು ಹೊಡೆದಿದ್ದರು ಎಂದು ನುಡಿಯುತ್ತೇನೆ. ಆ ವಿಚಾರವನ್ನು ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿಲ್ಲ. ನನ್ನ ತಾಬಾದಲ್ಲಿ ಆತ ಇದ್ದಾಗ ಹೊಡಿಬಡಿ ಮಾಡಿರುವುದೇ ಎಂದು ಕೇಳಿದರೆ ಆತ ಆತನ ಮನೆಗೆ ಹೋಗಿ ಬಂದು ಮಾಡುತ್ತಿದ್ದ ಹಾಗೂ ಆ ಸಂದರ್ಭದಲ್ಲಿ ಹೊಡೆದಿರುವುದು ಎಂದು ನುಡಿಯುತ್ತೇನೆ. ಸುಳ್ಳು ದಾವೆಯನ್ನು ಹೇಗಾದರೂ ಮಾಡಿ ಸಪೋರ್ಟ್ ಮಾಡಬೇಕೆಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಒಟ್ಟು ಆಸ್ತಿಯನ್ನು ಯಾಕೆ ಸೇರಿಸಿಲ್ಲ ಹಾಗೂ ಕೆಲವೆ ಆಸ್ತಿಗಳ

ಮೇಲೆ ದಾವೆ ಹಾಕಿಸಿರುವುದು ಎಂದರೆ ಎರಡು ಹೊಲವನ್ನು ಗದಿಗೆಪ್ಪ ಮತ್ತು ಮಹಾದೇವಪ್ಪ ಆಪಸಾತ್ ಮಾಡಿಕೊಂಡಿದ್ದಾರೆ ಹಾಗೂ ಅದರಲ್ಲಿ ನಮಗೆ ಹಿಸ್ಸೆ ಬಂದಿಲ್ಲ ಎಂದು ನುಡಿಯುತ್ತೇನೆ. ಖರೀದಿ ಪತ್ರ ರದ್ದು ಮಾಡಬೇಕು ಎಂದು ಈ ದಾವೆಯಲ್ಲಿ ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ನಾನು ಹೇಳಿ ಬರೆಸಿಲ್ಲ. ಸದರಿ ಗದಿಗೆಪ್ಪ ಹಾಗೂ ಮಹಾದೇವಪ್ಪ ಆಪಸಾತ್ ವಾಟ್ನಿ ಮಾಡಿಕೊಂಡು ಎಷ್ಟು ವರ್ಷವಾಯಿತು ಎಂದು ಕೇಳಿದರೆ ನನ್ನ ದೊಡ್ಡಪ್ಪ ತೀರಿಕೊಂಡಾಗಲೇ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತೇನೆ. ನನ್ನ ದೊಡ್ಡಪ್ಪ ಜೀವಂತವಿದ್ದಗಲೇ ವಾಟ್ನಿ ಮಾಡಿಸಿಕೊಟ್ಟಿದ್ದರೂ ಕೂಡ ಪ್ರತಿವಾದಿ ನಂ.1 ಮತ್ತು 3 ರವರೇ ವಾಟ್ನಿ ಮಾಡಿಕೊಂಡಿರುವುದು ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ಮಹಾದೇವಪ್ಪ ಹಿಸ್ಸೆಯಲ್ಲಿ ಮಹಾದೇವಪ್ಪ ಇದ್ದಾನೆ ಹಾಗೂ ಗದಿಗೆಪ್ಪನ ಹಿಸ್ಸೆಯಲ್ಲಿ ಗದಿಗೆಪ್ಪ ಇದ್ದಾನೆ ಎಂದರೆ ನಿಜ. ಹಿಸ್ಸೆ ರಿಸ್ಸೆಯಾದಾಗಿನಿಂದ ವಾದಿಯರು ಬಿಡ್ನಾಳಕ್ಕೆ ಬಂದು ಹೋಗುತ್ತಿದ್ದರು ಎಂದರೆ ನನ್ನ ಮನೆಗೆ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತೇನೆ. ಆಪಸಾತ್ ವಾಟ್ನಿಯಾಗಿದ್ದು ವಾದಿಯರಿಗೆ ಗೊತ್ತಿತ್ತು ಎಂದರೆ ನಿಜ. ಕೆಲವೊಂದು ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸದೇ ಇರಲು ಕಾರಣವೇನೆಂದರೆ ವಾದಿಯರು ಹಾಗೂ 2ನೇ ಪ್ರತಿವಾದಿ ಕಬೂಲಿ ಕೊಟ್ಟಿರುವುದರಿಂದ ಹಾಗೂ 50 ರೂ ಬಾಂಡಿನ ಮೇಲೆ ಕಬೂಲಿ ಪತ್ರ ಮಾಡಿಕೊಟ್ಟಿರುವುದರಿಂದ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ಮತ್ತು 2 ರವರು ಮೋಸದಿಂದ ವಾಟ್ನಿ ಮಾಡಿಕೊಂಡಿರುವುದು ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. 1992 ರಲ್ಲಿಯೇ ಹಿಸ್ಸೆ ರಿಸ್ಸೆಯಾಗಿ ಎಲ್ಲ ಪಕ್ಷಗಾರರು ಅದನ್ನು ಒಪ್ಪಿಕೊಂಡು ಅದರಂತೆ ನಡೆದುಕೊಳ್ಳುತ್ತ ಬಂದಿರುವುದರಿಂದ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕಬ್ಜೆ ಮಹಾದೇವಪ್ಪ ಹಾಗೂ ಗದಿಗೆಪ್ಪನ ಬಳಿಯೇ ಇರುವುದು ಎಂದರೆ ನಿಜ. ಮಾರಾಟ ಮಾಡಲು ಗದಿಗೆಪ್ಪನಿಗೆ ಹಕ್ಕು ಇಲ್ಲ ಎಂದು ಸುಳ್ಳು ಹೇಳಿರುವುದು ಎಂದರೆ ಸರಿಯಲ್ಲ. ವಾಟ್ನಿ ನಾತೆಯಿಂದ ಆತನೇ ಮಾಲೀಕನಾಗಿದ್ದಾನೆ ಎಂದರೆ ಸರಿಯಲ್ಲ. ಪ್ರತಿವಾದಿಯರನ್ನು ಬ್ಲ್ಯಾಕ್ ಮೇಲ್ ಮಾಡಲು ವಾದಿಯರನ್ನು ಎತ್ತಿಕಟ್ಟಿ ಸುಳ್ಳು ದಾವೆ ದಾಖಲಿಸಿರುವುದು ಎಂದರೆ ಸರಿಯಲ್ಲ. ವಾದಿಯರಿಗೆ ವಾಟ್ನಿಯಾಗಿರುವುದು ಹಕ್ಕು ಬಿಟ್ಟುಕೊಟ್ಟಿರುವುದು ಎಲ್ಲ ಗೊತ್ತಿದ್ದರೂ ಕೂಡ ನನ್ನ ಚಿಚಾವಣಿ ಮೇರೆಗೆ ದಾವೆ ದಾಖಲಿಸಿರುವುದು ಎಂದರೆ ಸರಿಯಲ್ಲ.

**<u>ಪಾಟಿ ಸವಾಲು ಶ್ರೀ.ಎಂ ಎಸ್ ಬಿ ವಕೀಲರು ಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.</u>**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

Sd/-

ಒಂದನೇ ಹಿರಿಯ ಸಿವಿಲ್ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.